**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 27-02-2024.</u>**

**<u>ಪಾಟೀ ಸವಾಲುಃ 2 ಮತ್ತು 4ನೇ ಪ್ರತಿವಾದಿ ಪರ ಶ್ರೀ.ವಿ ಎನ್ ಪಿ ವಕೀಲರಿಂದಃ</u>**

1. ಈ ದಾವೆಯನ್ನು ನಾನು ಮಾಡಿದ್ದೇನೆ. ಪ್ರತಿವಾದಿ ನಂ.2 ರವರ ವಿರುದ್ಧ ಮಾಡಿದ್ದೇನೆ. ದಿನಾಂಕಃ 20.02.2024 ರಂದು ಮಾಡಿದ್ದೇನೆ. ಈ ದಾವೆಯನ್ನು ನಾನು ಕೇವಲ ಪ್ರತಿವಾದಿ ನಂ.2 ರವರ ವಿರುದ್ಧ ಮಾತ್ರ ಹೂಡಿದ್ದೇನೆ. ಕಸಮಳಗಿ ಗ್ರಾಮದ ಸರ್ವೆ ನಂ.50/1, 55/1 ಜಮೀನುಗಳ ಕುರಿತು ಈ ದಾವೆ ಇದೆ. ನಾನು ಈ ದಾವೆಯನ್ನು ಕೌಂಟರಕ್ಲೇಮಗಾಗಿ ಹಾಕಿದ್ದೇನೆ. ಆಸ್ತಿಯಲ್ಲಿ ನಾವು ಹಕ್ಕುದಾರ ಎಂದು ಹೇಳಿದ್ದೇನೆ. ಸರ್ವೆ ನಂ.50/1 ಮತ್ತು 55/1 ರಲ್ಲಿ ನಾಲ್ಕು ಜನರ ಹೆಸರು ಇದೆ ಸರ್ವೆ ನಂ.55/1 ರಲ್ಲಿ ನನ್ನ ದೊಡ್ಡಪ್ಪ- ಮಲ್ಲಪ್ಪ ಬಡಸ್ಕರ ರವರಿಗೆ 1 ಎಕರೆ 18 ಗುಂಟೆ ಜಮೀನು ಇದೆ ಅದರಂತೆ ಸರ್ವೆ ನಂ.50/1 ರ 3 ಎಕರೆ 12 ಗುಂಟೆ ಜಮೀನಿನಲ್ಲಿ ನಾವು ಮೂರು ಜನರ ಹಕ್ಕು ಇದೆ ಎಂದು ಕೌಂಟರ ಕ್ಲೇಮನಲ್ಲಿ ಹೇಳಿದ್ದೇನೆ. ಸದರಿ ಎರಡು ಆಸ್ತಿಗಳು 1983 ರಲ್ಲಿ ಪಾಲುಗಳು ಆಗಿ ಮೇಲೆ ಹೇಳಿದಂತೆ ನಮ್ಮ ಪಾಲುಗಳಿಗೆ ಬಂದಿದೆ. 1983 ರಲ್ಲಿ ಹಿರಿಯರ ಸಮಕ್ಷಮ ಪಾಲು ವಾಟ್ನಿ ಆಗಿತ್ತು ಆದರೆ ಅದರ ಬರವಣಿಗೆ ಆಗಿದೆ ಅಥವಾ ಇಲ್ಲ ನನಗೆ ಗೊತ್ತಿಲ್ಲ. 1983 ರಲ್ಲಿ ಆಗಿದೆ ಎನ್ನಲಾದ

ಪಾಲುವಾಟ್ನಿ ಕುರಿತು ನಮ್ಮ ಹಿರಿಯರಿಗೆ ಗೊತ್ತು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ನನ್ನ ತಂದೆ ನನಗೆ ಸದರಿ ವಿಷಯ ತಿಳಿಸಿದ್ದಾರೆ. ನಾನು ಹುಬ್ಬಳ್ಳಿಯಲ್ಲಿ ವಾಸ ಇರುತ್ತೇನೆ. ನಾನು ಕಸಮಳಗಿ ಗ್ರಾಮದಲ್ಲಿ ಹುಟ್ಟಿ ನಂತರ ವಿದ್ಯಾಬ್ಯಾಸಕ್ಕಾಗಿ ಹುಬ್ಬಳ್ಳಿಗೆ ವಾಸಕ್ಕಾಗಿ ಹೋಗಿರುತ್ತೇನೆ. 1983ರ ಹಿಂದೆ ನಮ್ಮ ತಂದೆ ಕೆ.ಎಸ್.ಆರ್.ಟಿ.ಸಿ. ಯಲ್ಲಿ ಸೇವೆ ಸಲ್ಲಿಸುತ್ತಿದ್ದರಿಂದ ನಾವು ಹುಬ್ಬಳ್ಳಿಯಲ್ಲಿ ವಾಸ ಪ್ರಾರಂಭಿಸಿದ್ದೆವೆ.

2. ನಾನು ಸುಮಾರು 20-25 ವರ್ಷಗಳಿಂದ ಕೇಬಲ್ ಕೆಲಸ ಮಾಡುತ್ತಿದ್ದೇನೆ. ನನಗೆ ಸರ್ವೆ ನಂ.50/1 ಮತ್ತು 55/1 ಜಮೀನುಗಳು ಬಿಟ್ಟು ಬೇರೆ ಜಮೀನುಗಳು ಸಂಬಂಧ ಇಲ್ಲ. ಪ್ರತಿವಾದಿ ನಂ.9 ನನ್ನ ಸಹೋದರ, ಪ್ರತಿವಾದಿ ನಂ.10 ನನ್ನ ಸಹೋದರಿ, ಪ್ರತಿವಾದಿ ನಂ.11 ಮತ್ತು 12 ನನ್ನ ತಂದೆಯ ಸಹೋದರರು. ಪ್ರತಿವಾದಿ ನಂ.7 ನನ್ನ ಅಕ್ಕ. ನಾನು ಈ ದಿನ ನನ್ನ ಕಾಕಾನವರ ಪರವಾಗಿ ಹಾಗೂ ನನ್ನ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ನನ್ನ ಕಾಕಾನವರಾದ ಪ್ರತಿವಾದಿ ನಂ.11 ಮತ್ತು 12 ಕಸಮಳಗಿ ಗ್ರಾಮದಲ್ಲಿ ವಾಸ ಇರುತ್ತಾರೆ. ಪ್ರತಿವಾದಿ ನಂ.11 ಮತ್ತು 12 ರವರ ಒಪ್ಪಿಗೆ ಪಡೆದು ನಾನು ಸಾಕ್ಷಿಯನ್ನು ನುಡಿಯುತ್ತಿದ್ದೇನೆ. ಅವರು ಅಧಿಕಾರ ಪತ್ರ ಬರೆದುಕೊಟ್ಟಿಲ್ಲ. ನಾನು ಈ ಕೇಸು ಹಾಕುವ ಮುಂಚೆ ಅವರ ಜೊತೆಯಲ್ಲಿ ಮಾತನಾಡಿದ್ದೆ ಸುಮಾರು 6 ತಿಂಗಳ ಹಿಂದೆ ಅವರು

ನನಗೆ ಸಾಕ್ಷಿ ಹೇಳಲು ಒಪ್ಪಿಗೆ ನೀಡಿದ್ದರು. ನಾವು ಎಲ್ಲರೂ ನ್ಯಾಯಾಲಯಕ್ಕೆ ಹೋಗಲು ಆಗುವುದಿಲ್ಲ ನಮ್ಮ ಎಲ್ಲರ ಪರವಾಗಿ ನೀನು ಸಾಕ್ಷಿ ಕೊಡು ಎಂದು ನನಗೆ ಹೇಳಿದ್ದಾರೆ. ನನಗೆ ಪ್ರತಿವಾದಿ ನಂ.11 ಮತ್ತು 12 ರವರು ತಮ್ಮ ಪರವಾಗಿ ಸಾಕ್ಷಿ ನುಡಿಯಲು ಸಾಕ್ಷಿ ನುಡಿಯಲು ಒಪ್ಪಿ ಗೆ ಕೊಟ್ಟಿಲ್ಲ, ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.11 ಮತ್ತು 12 ಮತ್ತು ನಮ್ಮ ತಂದೆ ಬೇರೆ ಬೇರೆ ವಾಸ ಇರುತ್ತಾರೆ. 1983 ರಿಂದ ಸದರಿ ರವರು ಬೇರೆ ಬೇರೆ ವಾಸ ಇದ್ದಾರೆ. ಹುಬ್ಬಳ್ಳಿಯಲ್ಲಿ ನನಗೆ ಮನೆ ಇದೆ. ನಮ್ಮ ಮನೆ ಇರುವ ಪಕ್ಕದಲ್ಲಿ ಪ್ರತಿವಾದಿ ನಂ.2 ರವರ ಮನೆ ಇದೆ. ಪ್ರತಿವಾದಿ ನಂ.2 ರವರು ಸುಮಾರು 30-35 ವರ್ಷಗಳಿಂದ ಹುಬ್ಬಳ್ಳಿಯ ಸಾಯಿ ನಗರದಲ್ಲಿ ವಾಸ ಇದ್ದಾರೆ. ಪ್ರತಿವಾದಿ ನಂ.2 ರವರ ವಿದ್ಯಾಬ್ಯಾಸ ಹುಬ್ಬಳ್ಳಿಯಲ್ಲಿ ಆಗಿದೆ ಎಂದರೆ ನಿಜ. ಪ್ರತಿವಾದಿ ನಂ.3 ರವರು ಹುಬ್ಬಳ್ಳಿಯಲ್ಲಿ ವಾಸ ಇರುತ್ತಾರೆ. ಪ್ರತಿವಾದಿ ನಂ.3 ರವರು ಹುಬ್ಬಳ್ಳಿಯಲ್ಲಿ ವಾಸ ಇದ್ದು ಅವರಿಗೆ ಅಲ್ಲಿ ಮನೆ ಇದೆ ಹಾಗೂ ಅವರು ಅಲ್ಲಿ ಸುಮಾರು 20 ವರ್ಷಗಳಿಂದ ವಕೀಲರಾಗಿ ಕೆಲಸ ಮಾಡುತ್ತಿದ್ದಾರೆ.

3. ನಮ್ಮ ಮನೆತನಕ್ಕೆ ಕೇವಲ ಸರ್ವೆ ನಂ.50/1 ಮತ್ತು 55/1 ಇವೆ ಎಂದರೆ ನಿಜ. ಸರ್ವೆ ನಂ.50/1 ರಲ್ಲಿ ಮೂರು ಹಿಸ್ಸೆ ಇವೆ. ನಮ್ಮ

ತಂದೆಯ ಹಿಸ್ಸೆ, ಪ್ರತಿವಾದಿ ನಂ.11 ಮತ್ತು ಪ್ರತಿವಾದಿ ನಂ.12 ರವರ ತಲಾ ಒಂದು ಒಂದು ಹಿಸ್ಸೆ ಇದೆ. ಸರ್ವೆ ನಂ.50/1 ಜಮೀನನ್ನು ನಮ್ಮ ತಂದೆ ಹಾಗೂ ಅವರ ಸಹೋದರರು ಬೇರೆ ಬೇರೆ ಸಾಗುವಳಿ ಮಾಡುತ್ತಿದ್ದರು ಎಂದರೆ ನಿಜ. ಸರ್ವೆ ನಂ.50/1 ಜಮೀನಿಗೆ ನಮ್ಮ ತಂದೆ ಹಿಸ್ಸೆಗೆ ನಮ್ಮ ಹೆಸರುಗಳು ದಾಖಲು ಆಗಿವೆ. ಕೇವಲ ದಾಖಲೆಗಳಲ್ಲಿ ಹಿಸ್ಸೆಗಳನ್ನು ತೋರಿಸಲಾಗಿದೆ ಆದರೆ ಪೊಡಿ ಆಗಿಲ್ಲ. ನಮ್ಮ ತಂದೆಯ ಹಿಸ್ಸೆಗೆ ಪೊಡಿ ಆಗಬೇಕು ಎಂದು ನಾನು ಈ ದಾವೆಯಲ್ಲಿ ಕೇಳಿಕೊಂಡಿದ್ದೇನೆ. 1983 ರಲ್ಲಿ ಪಾಲು ಆಗಿದ್ದು ಇಲ್ಲಿಯವರೆಗೆ ಪೊಡಿ ಮಾಡಿಕೊಳ್ಳಲು ನಿಮಗೆ ಯಾವುದೇ ಅಡಚಣೆ ಇರಲಿಲ್ಲ ಎಂದರೆ ಸಾಕ್ಷಿಯು ಹಿಸ್ಸೆಯಂತೆ ಎಲ್ಲರು ತಮ್ಮ ತಮ್ಮ ಜಮೀನುಗಳಲ್ಲಿ ಸ್ವಾ ಧೀನದಲ್ಲಿ ಇದ್ದು ಸಾಗುವಳಿ ಮಾಡುತ್ತಿದ್ದೆವು ನಾವು ಸಹ ನಮ್ಮ ತಂದೆ ತೀರಿಕೊಂಡ ನಂತರ ಸಾಗುವಳಿ ಮಾಡುತ್ತಿದ್ದೆವೆ ಆದರೆ ಪೊಡಿ ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. ಪೊಡಿ ಮಾಡಲು ನಾವು ಯಾರು ಅರ್ಜಿಯನ್ನು ಕೊಟ್ಟಿರಲ್ಲಿಲ್ಲ ನಮ್ಮಲ್ಲಿ ಹಿಸ್ಸೆಯ ಕುರಿತು ಯಾವುದೇ ತಕರಾರು ಇರಲಿಲ್ಲ, ಸಾಕ್ಷಿಯು ಮುಂದುವರೆದು ನಾವು ಸಾಮೂಹಿಕವಾಗಿ ಸಾಗುವಳಿ ಮಾಡುತ್ತಿದ್ದೆವು ಎಂದು ಹೇಳುತ್ತಾರೆ. ಸಾಮೂಹಿಕವಾಗಿ ಸಾಗುವಳಿ ಮಾಡುತ್ತಿದ್ದೆವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಿರಿಯರು 3 ಎಕರೆ 12

ಗುಂಟೆಯಲ್ಲಿ ನಾವು ಮೂರು ಜನರಿಗೆ ಕೊಟ್ಟಿದ್ದರಿಂದ ನಾವು ಇಲ್ಲಿಯವರೆಗೆ ಪೊಡಿ ಮಾಡಿಕೊಳ್ಳದೆ ಹಿರಿಯರು ಹಂಚಿಕೆ ಮಾಡಿದಂತೆ ಆಸ್ತಿಗಳ ಸ್ವಾಧೀನದಲ್ಲಿ ಇದ್ದು ಸಾಗುವಳಿ ಮಾಡುತ್ತಿದ್ದೆವೆ ಎಂದು ಹೇಳುತ್ತಾರೆ. ಪಾಲುವಾಟ್ನಿ ಆಗಿದ ನಂತರದಿಂದ ನಮ್ಮ ಕುಟುಂಬ ಹಾಗೂ ಪ್ರತಿವಾದಿ ನಂ.2 ರವರ ಕುಟುಂಬದಲ್ಲಿ ಆಸ್ತಿಗಳ ವ್ಯವಹಾರ ಇಲ್ಲ ಆದರೆ ಮಾತುಕತೆ ಇದೆ. ಪ್ರತಿವಾದಿ ನಂ.2 ರವರು ಸರ್ವೆ ನಂ.50/1 ಮತ್ತು 55/1 ರ ದಾಖಲೆಗಳನ್ನು ವಾಟ್ನಿಯಂತೆ ಸರಿಯಾಗಿ ಮಾಡಿಕೊಳ್ಳಲು ಬಹಳ ಸಲ ತಿಳಿಸಿದ್ದರು ಎಂದರೆ ನಿಜ. ಸಾಕ್ಷಿಯು ನಾನು ದಾಖಲೆ ಸರಿಪಡಿಸಿಕೊಂಡಿದ್ದೆನೆ ಎಂದು ಹೇಳುತ್ತಾರೆ. ನಮ್ಮ ತಪ್ಪಿ ನಿಂದ ದಾಖಲೆಗಳು ಸರಿ ಪಡಿಸದೆ ಉಳಿದುಕೊಂಡಿದೆ ಎಂದರೆ ಸರಿಯಲ್ಲ.

4. ವಾದಿ ನಂ.1 ಊರಿನಲ್ಲಿ ಬೇರೆ ಮನೆ ಮಾಡಿಕೊಂಡು ವಾಸ ಇದ್ದಾರೆ ಎಂದರೆ ನಿಜ. ಪ್ರತಿವಾದಿ ನಂ.2 ರವರು ಬೇರೆ ವಾಸ ಇರುತ್ತಾರೆ ಎಂದರೆ ಸಾಕ್ಷಿಯು ಅವರೆಲ್ಲರು ಕೂಡಿ ಇರುತ್ತಾರೆ ಎಂದು ಹೇಳುತ್ತಾರೆ. ದಾಖಲಾತಿಗಳಲ್ಲಿ ಅವರು ಕೂಡಿ ಇರುವ ಬಗ್ಗೆ ಇಲ್ಲ, ಆದರೆ ವ್ಯವಹಾರಗಳನ್ನು ಕೂಡಿ ಮಾಡುತ್ತಾರೆ. ವ್ಯವಹಾರಗಳನ್ನು ಕೂಡಿ ಮಾಡುತ್ತಾರೆ ಎಂದು ಹೇಳಲು ದಾಖಲೆ ಇಲ್ಲ. ಸಾಕ್ಷಿ ಕೊಡಲು ನಾನು ಪ್ರತಿವಾದಿ ನಂ.3 ರವರೊಂದಿಗೆ ಬಂದಿದ್ದೆನೆ ಎಂದರೆ ಸರಿಯಲ್ಲ. ಕಳಮಳಗಿ

ಗ್ರಾಮದಲ್ಲಿ ನನ್ನ ಕಾಕಾನ ಮನೆಯಲ್ಲಿ ನಾನು ಈಗ ಇದ್ದೇನೆ. ನಮ್ಮ ಹೊಲಗಳ ಕೆಲಸ ನಡೆದಿದೆ ಆದ್ದರಿಂದ ಸುಮಾರು 1 ತಿಂಗಳಿನಿಂದ ನನ್ನ ಕಾಕಾನ ಮನೆಯಲ್ಲಿ ಕಸಮಳಗಿ ಗ್ರಾಮದಲ್ಲಿ ಇದ್ದೇನೆ. ಸರ್ವೆ ನಂ.50/1 ರ ಪೂರ್ವಕ್ಕೆ ಊರು ಇದೆ, ದಕ್ಷಿಣನಕ್ಕೆ ಕೊಪರೆಕರ ರವರ ಹೊಲ ಇದೆ. ಉತ್ತರಕ್ಕೆ ಹೂವಪ್ಪನವರ ಹೊಲ ಇದೆ. ಪಶ್ಚಿಮಕ್ಕೆ ಹಳ್ಳ ಇದೆ. ಸರ್ವೆ ನಂ.50/1 ರ ನಕಾಶೆ ನೋಡಿದ್ದೇನೆ ಆದರೆ ನೆನಪಿಲ್ಲ. ಸರ್ವೆ ನಂ.50/1 ರ ಮೇಲೆ ಹೇಳಿದ ಚಕ್ಕಬಂದಿ ನಕಾಶೆಯಂತೆ ಇಲ್ಲ ನಾನು ಸುಳ್ಳು ಚಕಬಂದಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.55/1 ರ ಪೂರ್ವಕ್ಕೆ ಊರು ಇದೆ, ಪಶ್ಚಿಮಕ್ಕೆ ಈರಪ್ಪ ಬಡಸ್ಕರ ಮತ್ತು ಪರಶುರಾಮ ಬಡಸ್ಕರ ರವರ ಜಮೀನು ಇದೆ. ಉತ್ತರಕ್ಕೆ ಪರಶುರಾಮ ಪೂಜೇರಿ ರವರ ಜಮೀನು. ದಕ್ಷಿಣಕ್ಕೆ ಶಿವಾಜಿ ರಾಮಪ್ಪ ಬಡಸ್ಕರ ರವರ ಜಮೀನು ಇದೆ. ಸದರಿ ಮೇಲೆ ಹೇಳಿದ ಚಕಬಂದಿ ಸುಳ್ಳು ಇದೆ ಎಂದರೆ ಸರಿಯಲ್ಲ. ಸರ್ವೆ ನಂ.55/1 ರ ನಕಾಶೆ ನೋಡಿಲ್ಲ. ನಾನು ಹೊಲದ ಹಾಗೂ ಬೇರೆ ಯಾವುದೇ ಕೆಲಸ ಮಾಡುವುದಿಲ್ಲ ಕೇವಲ ಹುಬ್ಬಳ್ಳಿಯಲ್ಲಿ ಓಡಾಡಿಕೊಂಡು ಇರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿ ಮತ್ತು ಪ್ರತಿವಾದಿ ನಂ.3 ರವರೊಂದಿಗೆ ಶಾಮಿಲಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ರವರಿಗೆ ಸೇರಿದ ಆಸ್ತಿಯನ್ನು

ಕಬಳಿಸುವ ಉದ್ದೇಶದಿಂದ ವಾದಿ ಹಾಗೂ ಪ್ರತಿವಾದಿ ನಂ.3 ರವರೊಂದಿಗೆ ಶಾಮಿಲಾಗಿ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಾಗಲೆ ನಮ್ಮ ಕುಟುಂಬದಲ್ಲಿ ಪಾಲುವಾಟ್ನಿ ಆದರು ಸಹ ನಾನು ಸುಳ್ಳು ಕೌಂಟರ ಕ್ಲೇಮ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**